ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್-804/2015

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ: 09/02/2017.

ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರ
ಅನ್ವಯ ಶಿಫಾರಸ್ಸು ವರದಿ

ವಿಷಯ: 2ನೇ ಎದುರುದಾರರಾದ ಶ್ರೀ ಶ್ರೀಕಂಠಾಚಾರಿ ರವರ ಪತ್ನಿ ವರಲಕ್ಷ್ಮೀ ರವರು ಅವರ ನಿವೇಶನ ಹಾಗೂ ಲಕ್ಷ್ಮಮ್ಮ ಲೇಟ್ ಕೃಷ್ಣಶೆಟ್ಟಿ ರವರ ಮನೆಯ ಮಧ್ಯೆ ದಾಖಲೆಗಳಂತೆ ಇರಬೇಕಾದ ಗಲ್ಲಿಯನ್ನು ಬಿಡದೇ ಅನದೀಕೃತವಾಗಿ ವಿದ್ಯುತ್ ಕಂಬವನ್ನು ಒಳಗೊಂಡಂತೆ ಗಲ್ಲಿಯನ್ನು ಅತೀಕ್ರಮಿಸಿಕೊಂಡು ಕಾನೂನು ಬಾಹಿರವಾಗಿ ಕಾಂಪೌಂಡನ್ನು ನಿರ್ಮಿಸಿಕೊಂಡಿರುವ ಬಗ್ಗೆ ಸರ್ಕಾರಿ ಸರ್ವೆಯರ್‌ಗಳಿಂದ ಅಳತೆ ಮಾಡಿಸಿ, ಅನಧೀಕೃ ಒತ್ತುವರಿಯನ್ನು ತೆರವುಗೊಳಿಸಲು ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಹಾಗೂ 2ನೇಯದಾಗಿ, ದೂರುದಾರರ ಮನೆಯ ಅಳತೆಗಳು ಹಾಗೂ 1999ರಲ್ಲಿ ಗ್ರಾಮ ಪಂಚಾಯತಿ ವತಿಯಿಂದ ನೀಡಲಾಗಿರುವ ಪಟ್ಟೆಯಲ್ಲಿನ ಅಳತೆಗಳಿಗೂ ಹಾಲಿ ಇರುವ ಅಳತೆಗಳಿಗೂ ಬಹಳ ವ್ಯತ್ಯಾಸವಿರುವ ಬಗ್ಗೆ ಸರ್ಕಾರಿ ಸರ್ವೆಯರ್‌ನಿಂದ ಅಳತೆ ಮಾಡಿಸಿ, ಕಾನೂನು ಬಾಹಿರವಾಗಿ ಮಾಡಿಕೊಂಡಿರುವ ಅತಿಕ್ರಮಣಗಳನ್ನು ತೆರವುಗೊಳಿಸುವ ಬಗ್ಗೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ವರದಿಯ ನಡವಳಿಕೆ-ಕುರಿತು.,

*****

ಶ್ರೀಮತಿ ನಾಗಮಣಿ ಕೋಂ ಲೇಟ್ ಮುನೇಗೌಡ, ಕಮ್ಮನಹಳ್ಳಿ ಅಂಚೆ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ ಇವರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, (1) ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಬಳ್ಳೇಕೆರೆ ಗ್ರಾಮ ಪಂಚಾಯತ್, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ ಮತ್ತು, (2) ಶ್ರೀ ಶ್ರೀಕಂಠಾಚಾರಿ ಬಿನ್ ಕಾಳಾಚಾರಿ, ಗವಿಮಠ, ಬಳ್ಳೇಕೆರೆ ಗ್ರಾಮ ಪಂಚಾಯತ್, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ

(ಇನ್ನು ಮುಂದೆ '1 ಮತ್ತು 2ನೇ ಎದುರುದಾರರುಗಳು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ದಾಖಲಿಸಿ, ದೂರುದಾರರ ಮನೆ ಪಕ್ಕ ಮನೆ ಕಟ್ಟಿಕೊಂಡಿರುವ ಶ್ರೀ ಶ್ರೀಕಂಠಾಚಾರಿ ಬಿನ್ ಕಾಳಾಚಾರಿ, ಕಾಮನಹಳ್ಳಿ, ಬಳ್ಳೇಕೆರೆ ಗ್ರಾಮ ಪಂಚಾಯತ್, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ ರವರು ರಸ್ತೆಯಲ್ಲಿ 3 ಅಡಿ ಒತ್ತುವರಿ ಮಾಡಿಕೊಂಡಿರುತ್ತಾರೆ ಹಾಗೂ ಸದರಿಯವರು ವಿದ್ಯುತ್ ಕಂಬವನ್ನು ತಮ್ಮ ಕಾಂಪೌಂಡ್ ಒಳಕ್ಕೆ ಸೇರಿಸಿಕೊಂಡಿರುತ್ತಾರೆ, ಇದರಿಂದಾಗಿ ದೂರುದಾರರ ಮನೆಗೆ ದಾರಿ ಇಲ್ಲದಂತಾಗಿದೆ. ಈ ತೊಂದರೆಯ ಬಗ್ಗೆ ಗ್ರಾಮ ಪಂಚಾಯತಿಗೆ ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿರುವುದಿಲ್ಲವೆಂದು ಆರೋಪಿಸಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿಯಲ್ಲಿ ಪ್ರದತ್ತವಿರುವ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ಆನಂತರ ಸದರಿ ದೂರಿನ ತನಿಖೆ ಕೈಗೊಳ್ಳಲು ಸದರಿ ಸಂಸ್ಥೆಯ ಮುಖ್ಯ ಅಭಿಯಂತರರು, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರಿಗೆ ವಹಿಸಿದ್ದು ಸದರಿಯವರು ದೂರಿನ ತನಿಖೆ ಕೈಗೊಳ್ಳಲು ಅವರ ಅಧೀನ ಅಧಿಕಾರಿಯಾದ ಶ್ರೀ ಹೆಚ್.ಎನ್.ಶ್ರೀನಿವಾಸ್ ಮೂರ್ತಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಸಂಬೋದಿಸಲಾಗುವುದು) ಇವರಿಗೆ ವಹಿಸಿದ್ದು, ತನಿಖಾಧಿಕಾರಿಗಳು ದಿನಾಂಕ: 09/11/2016 ರಂದು ತಮ್ಮ ವರದಿಯನ್ನು ಮುಖ್ಯ ಅಭಿಯಂತರರು, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರಿಗೆ ಸಲ್ಲಿಸಿದ್ದು, ಸದರಿ ವರದಿಯನ್ನು ಮುಖ್ಯ ಅಭಿಯಂತರರು, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಒಪ್ಪಿ ತಮ್ಮ ಷರಾದೊಂದಿಗೆ ತಮ್ಮ ವರದಿಯನ್ನು ದಿನಾಂಕ: 01/12/2016 ರಂದು ಸಲ್ಲಿಸಿರುತ್ತಾರೆ.

12(1)

3. **ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ:**

- 2ನೇ ಎದುರುದಾರರು ದೂರುದಾರರ ನಿವೇಶನದ ಉತ್ತರಕ್ಕಿರುವ (ವಿವಾದಿತ) ರಸ್ತೆಯಲ್ಲಿ 3 ಅಡಿ ಒತ್ತುವರಿ ಮಾಡಿರುವ ಬಗ್ಗೆ ಸಾಬೀತಾಗಿರುವುದಿಲ್ಲ.
- ಆದರೆ, ದಾಖಲಾತಿಗಳಂತೆ ಹಾಗೂ ಸ್ಥಳದಲ್ಲಿ ಅಳತೆ ಮಾಡಿದಂತೆ 2ನೇ ಎದುರುದಾರರಾದ ಶ್ರೀ ಶ್ರೀಕಂಠಾಚಾರಿಯವರ ನಿವೇಶನದ ಪಶ್ಚಿಮಕ್ಕೆ ಇರುವ ಗಲ್ಲಿಯನ್ನು ಒತ್ತವರಿ ಮಾಡಿಕೊಂಡು ಗಲ್ಲಿಗೆ ಜಾಗ ಬಿಡದೆ ನಂತರದ ಶ್ರೀಮತಿ ಲಕ್ಷ್ಮಮ್ಮ ಲೇಟ್ ಕೃಷ್ಣಶೆಟ್ಟಿ ರವರ ಮನೆಯತನಕ ಕಾಂಪೌಂಡ್ ಕಟ್ಟಿದ್ದು, ಇದರಿಂದಾಗಿ ವಿದ್ಯುತ್ ದೀಪವು 2ನೇ ಎದುರುದಾರರ ಕಾಂಪೌಂಡ್ ಒಳಗಡೆ ಬಂದಿರುವುದು ಸಾಬೀತಾಗಿದೆ. ಆದ್ದರಿಂದ, ವಿವಾಧಿತ ಹಾಗೂ ಅಕ್ಕ ಪಕ್ಕದ ನಿವೇಶನಗಳನ್ನು ಮತ್ತೊಮ್ಮೆ ಸರ್ಕಾರಿ ಸರ್ವೆಯರ್ ನಿಂದ ಅಳತೆಗೊಳಿಸಿ 2ನೇ ಎದುರುದಾರರ ನಿವೇಶನ ಹಾಗೂ ಲಕ್ಷ್ಮಮ್ಮ ಲೇಟ್ ಕೃಷ್ಣಶೆಟ್ಟಿ ರವರ ಮನೆ ಮಧ್ಯೆ ಇರಬೇಕಾದ ಗಲ್ಲಿಯನ್ನು ತೆರವುಗೊಳಿಸಬಹುದಾಗಿದೆ.
- 2ನೇ ಎದುರುದಾರರು ಗಲ್ಲಿಯ ಪ್ರದೇಶವನ್ನು ಅತಿಕ್ರಮಿಸಿಕೊಂಡಿರುವುದರಿಂದ ವಿದ್ಯುತ್ ಕಂಬವು 2ನೇ ಎದುರುದಾರರ ಕಾಂಪೌಂಡ್ ಒಳಕ್ಕೆ ಸೇರಿಸಿಕೊಂಡಿರುವುದು ತನಿಖೆಯಲ್ಲಿ ಸಾಬೀತಾಗಿರುತ್ತದೆ.
- 2ನೇ ಎದುರುದಾರರಾದ ಶ್ರೀ ಶ್ರೀಕಂಠಾಚಾರಿ ರವರ ಪತ್ನಿ ವರಲಕ್ಷ್ಮೀ ರವರ ನಿವೇಶನ ಹಾಗೂ ಲಕ್ಷ್ಮಮ್ಮ ಲೇಟ್ ಕೃಷ್ಣಶೆಟ್ಟಿ ರವರ ಮನೆ ಮಧ್ಯೆ ದಾಖಲೆಗಳಂತೆ ಇರಬೇಕಾದ ಗಲ್ಲಿಯನ್ನು ತೆರವುಗೊಳಿಸಬೇಕಾಗಿದ್ದು, ಸದರಿ ಗಲ್ಲಿಯ ಪ್ರದೇಶದಲ್ಲಿ ವಿದ್ಯುತ್ ಕಂಬವು ಬರುತ್ತಿದ್ದು, ಗಲ್ಲಿಯನ್ನು ಗುರುತಿಸಿ ಅತಿಕ್ರಮಣವನ್ನು ತೆರವುಗೊಳಿಸಿದ್ದಲ್ಲಿ, ಶ್ರೀ ಶ್ರೀಕಂಠಾಚಾರಿ ರವರ ಪತ್ನಿ ವರಲಕ್ಷ್ಮೀ ರವರ ಕಾಂಪೌಂಡ್ ನಿಂದ ವಿದ್ಯುತ್ ಕಂಬವನ್ನು ತೆರವುಗೊಳಿಸಿದಂತಾಗುತ್ತದೆ.
- ದೂರುದಾರರ ಮನೆಯ ಅಳತೆಗಳು 1999ರಲ್ಲಿ ಗ್ರಾಮ ಪಂಚಾಯತಿ ವತಿಯಿಂದ ನೀಡಲಾಗಿರುವ ಪಟ್ಟೆಯಲ್ಲಿನ ಅಳತೆಗಳಿಗೂ ಹಾಲಿ ಇರುವ ಅಳತೆಗಳಿಗೂ ಬಹಳ

Sd/-

ವ್ಯತ್ಯಾಸವಿದ್ದು, ಈ ವ್ಯತ್ಯಾಸದ ಬಗ್ಗೆ ಸರ್ಕಾರಿ ಸರ್ವೆಯರ್‌ನಿಂದ ಅಳತೆ ಮಾಡಿಸಿ ಕ್ರಮ ಕೈಗೊಳ್ಳುವಂತೆ ಪಿ.ಡಿ.ಓ., ರವರಿಗೆ ಸೂಚಿಸಬಹುದಾಗಿದೆ.

- 2ನೇ ಎದುರುದಾರರು ಹಾಗೂ ದೂರುದಾರರ ಮನೆಗಳಲ್ಲದೇ ಸದರಿ ವಿವಾದಿತ ರಸ್ತೆಯಲ್ಲಿ ಬರುವ ಮನೆಗಳ ಅಳತೆಗಳನ್ನು ದಾಖಲೆಗಳಂತೆ ಪರಿಶೀಲಿಸಿ, ಸರ್ಕಾರಿ ಸರ್ವೆಯರ್‌ನಿಂದ ಅಳತೆಗೊಳಿಸಿ ಸೂಕ್ತ ಕ್ರಮವನ್ನು ಈಗಾಗಲೇ ಬಳ್ಳೇಕೆರೆ ಗ್ರಾಮ ಪಂಚಾಯತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಕೈಗೊಳ್ಳಬೇಕಾಗಿತ್ತು. ಆದರೆ, ಈವರೆವಿಗೆ ಈ ನಿಟ್ಟಿನಲ್ಲಿ ಯಾವುದೇ ಕ್ರಮ ಕೈಗೊಂಡಿರುವ ಬಗ್ಗೆ ದಾಖಲಾತಿಗಳಿಂದ ಕಂಡುಬರುವುದಿಲ್ಲ.
- 2ನೇ ಎದುರುದಾರರು ತಮ್ಮ ಮನೆಯ ಕಾಂಪೌಂಡ್‌ನ್ನು ಇವರ ಪಕ್ಕದ ಮನೆಯ ಶ್ರೀಮತಿ ಲಕ್ಷ್ಮಮ್ಮ ಬಿನ್ ಲೇಟ್ ಕೃಷ್ಣ ಶೆಟ್ಟಿ ರವರ ಮನೆಯ ಮಧ್ಯ ಇರಬೇಕಾದ ಗಲ್ಲಿಯನ್ನು ಹಾಗೂ ಈ ಗಲ್ಲಿಯಲ್ಲಿ ಅಳವಡಿಸಿರುವ ಸಾರ್ವಜನಿಕ ವಿದ್ಯುತ್ ದೀಪವನ್ನು ಸೇರಿಸಿಕೊಂಡು ಒತ್ತುವರಿ ಮಾಡಿ ಕಾಂಪೌಂಡ್ ನಿರ್ಮಾಣ ಮಾಡಿರುವುದು ಸಾಬೀತಾಗಿರುತ್ತದೆ ಹಾಗೂ ಈ ಬಗ್ಗೆ ಪಂಚಾಯತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಯಾವುದೇ ಕ್ರಮ ವಹಿಸದೇ ಇರುವುದು ಸಾಬೀತಾಗಿದೆ.

4. ಮುಖ್ಯ ಅಭಿಯಂತರರು, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಸಲ್ಲಿಸಿರುವ ವರದಿಯನ್ನು ಪರಿಶೀಲಿಸಲಾಗಿ, ಬಳ್ಳೇಕೆರೆ ಗ್ರಾಮ ಪಂಚಾಯತ್‌ನಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದವರು ಸದರಿ ವಿವಾದಿತ ರಸ್ತೆಯಲ್ಲಿ ಬರುವ ಮನೆಗಳ ಅಳತೆಗಳನ್ನು ದಾಖಲೆಗಳಂತೆ ಪರಿಶೀಲಿಸಿ, ಸರ್ಕಾರಿ ಸರ್ವೆಯರ್‌ನಿಂದ ಅಳತೆಗೊಳಿಸಿ ಸೂಕ್ತ ಕ್ರಮವನ್ನು ಕೈಗೊಳ್ಳಬೇಕಾಗಿತ್ತು ಎಂದು ತಿಳಿಸಿರುತ್ತಾರೆ. ಹಾಗೂ ಮಂಡ್ಯ ಜಿಲ್ಲೆಯ ಬಳ್ಳೇಕೆರೆ ಗ್ರಾಮ ಪಂಚಾಯತ್‌ನಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸಿರುವವರು (1) ಶ್ರೀ ಡಿ.ಕೆ.ಕೃಷ್ಣಮೂರ್ತಿ ಬಿನ್ ಲೇಟ್ ಕೃಷ್ಣಶೆಟ್ಟಿ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಬಳ್ಳೇಕೆರೆ ಗ್ರಾಮ ಪಂಚಾಯತ್, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ, ಹಾಲಿ

ನಿವೃತ್ತಿ (ವಾಸ ಸ್ಥಳ: ಯದುಶ್ರೀ ನಿಲಯ, ಜಯನಗರ ಬಡಾವಣೆಗೆ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ), (2) ಶ್ರೀ ಎಸ್.ಯೋಗೇಶ್ ಬಿನ್ ಲೇಟ್ ಸತ್ತೇಗೌಡ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಬಳ್ಳೇಕೆರೆ ಗ್ರಾಮ ಪಂಚಾಯತ್, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ, ಹಾಲಿ ಮಂದಗೆರೆ ಗ್ರಾಮ ಪಂಚಾಯತಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ, (3) ಶ್ರೀ ಎಂ.ವಿ.ವೆಂಕಟೇಶ್ ಬಿನ್ ಲೇಟ್ ವೆಂಕಟಪ್ಪ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಬಳ್ಳೇಕೆರೆ ಗ್ರಾಮ ಪಂಚಾಯತ್, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ ಹಾಲಿ ಆಲಂಬಾಡಿ ಕಾವಲು ಗ್ರಾಮ ಪಂಚಾಯತಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ, (4) ಶ್ರೀ ಎ.ಎಸ್.ಸಿದ್ದರಾಜು ಬಿನ್ ಲೇಟ್ ಸಿದ್ದೇಗೌಡ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಬಳ್ಳೇಕೆರೆ ಗ್ರಾಮ ಪಂಚಾಯತ್, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ, ಹಾಲಿ ಕಂಬದಳ್ಳಿ ಗ್ರಾಮ ಪಂಚಾಯತಿ, ಮಂಡ್ಯ ತಾಲ್ಲೂಕು ಮತ್ತು, (5) ಡಾ: ನರಸಿಂಹರಾಜ, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಬಳ್ಳೇಕೆರೆ ಗ್ರಾಮ ಪಂಚಾಯತ್, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ, ಹಾಲಿ ಬೂಕನಕೆರೆ ಗ್ರಾಮ ಪಂಚಾಯತಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ ಎಂದು ತಿಳಿಸಿರುತ್ತಾರೆ. ಸದರಿಯವರು ದೂರಿನಲ್ಲಿ ಎದುರುದಾರರಾಗಿರುವುದಿಲ್ಲ. ಆದ್ದರಿಂದ, ಮೇಲ್ಕಂಡ 5 ಜನರು 3 ರಿಂದ 7ನೇ ಎದುರುದಾರರುಗಳನ್ನಾಗಿ ಮುಖಪುಟದಲ್ಲಿ implead ಮಾಡಲಾಗಿರುತ್ತದೆ. ನಂತರ 3 ರಿಂದ 7ನೇ ಎದುರುದಾರರಿಗೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ತಿಳಿಸಲಾಗಿದ್ದು, 3 ರಿಂದ 7ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ, ದೂರಿನ ಆಪಾದನೆಗಳನ್ನು ನಿರಾಕರಿಸಿರುತ್ತಾರೆ. ಆದರೆ, ದೂರಿಗೆ ಸಂಬಂಧಪಟ್ಟ ಪೂರಕ ದಾಖಲಾತಿಗಳನ್ನು ಒದಗಿಸಿರುವುದಿಲ್ಲ. ಪ್ರಸ್ತುತ ಹಂತದಲ್ಲಿ ಸದರಿ 3 ರಿಂದ 7ನೇ ಎದುರುದಾರರುಗಳ ಆಕ್ಷೇಪಣೆಗಳನ್ನು ಒಪ್ಪಲಾಗುವುದಿಲ್ಲ.

5. ದೂರಿನಲ್ಲಿ ಇರುವ ಆಪಾದನೆಗಳು, ಎದುರುದಾರರ ಆಕ್ಷೇಪಣೆಗಳು ಹಾಗೂ ತನಿಖಾ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ 3 ರಿಂದ 7ನೇ ಎದುರುದಾರರುಗಳು ಈ ಕೆಳಕಂಡಂತೆ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

- 2ನೇ ಎದುರುದಾರರಾದ ಶ್ರೀ ಶ್ರೀಕಂಠಾಚಾರಿಯವರು ಅವರ ನಿವೇಶನದ ಪಶ್ಚಿಮಕ್ಕೆ ಇರುವ ಗಲ್ಲಿಯನ್ನು ಒತ್ತವರಿ ಮಾಡಿಕೊಂಡು ಗಲ್ಲಿಗೆ ಜಾಗ ಬಿಡದೆ ನಂತರದ ಶ್ರೀಮತಿ ಲಕ್ಷ್ಮಮ್ಮ ಲೇಟ್ ಕೃಷ್ಣಶೆಟ್ಟಿ ರವರ ಮನೆಯ ತನಕ ಕಾಂಪೌಂಡ್ ಕಟ್ಟಿದ್ದು, ಇದರಿಂದಾಗಿ ವಿದ್ಯುತ್ ದೀಪವು 2ನೇ ಎದುರುದಾರರ ಕಾಂಪೌಂಡ್ ಒಳಗಡೆ ಬಂದಿರುತ್ತದೆ.
- 2ನೇ ಎದುರುದಾರರಾದ ಶ್ರೀ ಶ್ರೀಕಂಠಾಚಾರಿಯವರು ಗಲ್ಲಿಯ ಪ್ರದೇಶವನ್ನು ಅತಿಕ್ರಮಿಸಿಕೊಂಡಿರುವುದರಿಂದ ವಿದ್ಯುತ್ ಕಂಬವು 2ನೇ ಎದುರುದಾರರ ಕಾಂಪೌಂಡ್ ಒಳಕ್ಕೆ ಸೇರಿಸಿಕೊಂಡಿರುವುದು ತನಿಖೆಯಲ್ಲಿ ಸಾಬೀತಾಗಿರುತ್ತದೆ.
- 3 ರಿಂದ 7ನೇ ಎದುರುದಾರರುಗಳು, 2ನೇ ಎದುರುದಾರರು ಹಾಗೂ ದೂರುದಾರರ ಮನೆಗಳಲ್ಲದೇ ಸದರಿ ವಿವಾದಿತ ರಸ್ತೆಯಲ್ಲಿ ಬರುವ ಮನೆಗಳ ಅಳತೆಗಳನ್ನು ದಾಖಲೆಗಳಂತೆ ಪರಿಶೀಲಿಸಿ, ಸರ್ಕಾರಿ ಸರ್ವೆಯರ್‌ನಿಂದ ಅಳತೆಗೊಳಿಸಿ ಸೂಕ್ತ ಕ್ರಮವನ್ನು ಈಗಾಗಲೇ ಕೈಗೊಳ್ಳಬೇಕಾಗಿತ್ತು. ಆದರೆ, ಈವರೆವಿಗೆ ಈ ನಿಟ್ಟಿನಲ್ಲಿ ಯಾವುದೇ ಕ್ರಮ ಕೈಗೊಳ್ಳದೇ 3 ರಿಂದ 7ನೇ ಎದುರುದಾರರುಗಳು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.
- 2ನೇ ಎದುರುದಾರರು ತಮ್ಮ ಮನೆಯ ಕಾಂಪೌಂಡ್‌ನ್ನು ಇವರ ಪಕ್ಕದ ಮನೆಯ ಶ್ರೀಮತಿ ಲಕ್ಷ್ಮಮ್ಮ ಬಿನ್ ಲೇಟ್ ಕೃಷ್ಣ ಶೆಟ್ಟಿ ರವರ ಮನೆಯ ಮಧ್ಯ ಇರಬೇಕಾದ ಗಲ್ಲಿಯನ್ನು ಹಾಗೂ ಈ ಗಲ್ಲಿಯಲ್ಲಿ ಅಳವಡಿಸಿರುವ ಸಾರ್ವಜನಿಕ ವಿದ್ಯುತ್ ದೀಪವನ್ನು ಸೇರಿಸಿಕೊಂಡು ಒತ್ತುವರಿ ಮಾಡಿ ಕಾಂಪೌಂಡ್ ನಿರ್ಮಾಣ ಮಾಡಿರುವುದ್ದರ ಬಗ್ಗೆ 3 ರಿಂದ 7ನೇ ಎದುರುದಾರರುಗಳು ಕಾನೂನು ರೀತ್ಯಾ ಯಾವುದೇ ಕ್ರಮ ಕೈಗೊಳ್ಳದೇ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

- ದೂರುದಾರರ ಮನೆಯ ಅಳತೆಗಳು 1999ರಲ್ಲಿ ಗ್ರಾಮ ಪಂಚಾಯತಿ ವತಿಯಿಂದ ನೀಡಲಾಗಿರುವ ಪಟ್ಟೆಯಲ್ಲಿನ ಅಳತೆಗಳಿಗೂ ಹಾಲಿ ಇರುವ ಅಳತೆಗಳಿಗೂ ಬಹಳ ವ್ಯತ್ಯಾಸವಿದ್ದು, ಈ ವ್ಯತ್ಯಾಸದ ಬಗ್ಗೆ 3 ರಿಂದ 7ನೇ ಎದುರುದಾರರುಗಳು ಸರ್ಕಾರಿ ಸರ್ವೆಯರ್‌ನಿಂದ ಅಳತೆ ಮಾಡಿಸಿ, ಅನಧೀಕೃತ ಒತ್ತುವರಿಯನ್ನು ತೆರವುಗೊಳಿಸಲು ಕಾನೂನು ರೀತ್ಯಾ ಕ್ರಮ ಕೈಗೊಳ್ಳದೇ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

6. ದೂರುದಾರರು ದೂರು ಹಾಗೂ ತನಿಖಾಧಿಕಾರಿಗಳ ವರದಿ ಹಾಗೂ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಿದಾಗ, ಮೇಲ್ನೋಟಕ್ಕೆ '3 ರಿಂದ 7ನೇ ಎದುರುದಾರರುಗಳ' ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಮುಂದುವರಿಯುವುದು ಅಗತ್ಯ ಎಂದು ಕಂಡುಬಂದಿದ್ದು, '3 ರಿಂದ 7ನೇ ಎದುರುದಾರರುಗಳು' ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾಗುತ್ತದೆ.

7. ಆದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, 2ನೇ ಎದುರುದಾರರಾದ ಶ್ರೀ ಶ್ರೀಕಂಠಾಚಾರಿ ರವರ ಪತ್ನಿ ವರಲಕ್ಷ್ಮೀ ರವರು ಅವರ ನಿವೇಶನ ಹಾಗೂ ಲಕ್ಷ್ಮಮ್ಮ ಲೇಟ್ ಕೃಷ್ಣಶೆಟ್ಟಿ ರವರ ಮನೆಯ ಮಧ್ಯೆ ದಾಖಲೆಗಳಂತೆ ಇರಬೇಕಾದ ಗಲ್ಲಿಯನ್ನು ಬಿಡದೇ ಅನದೀಕೃತವಾಗಿ ವಿದ್ಯುತ್ ಕಂಬವನ್ನು ಒಳಗೊಂಡಂತೆ ಗಲ್ಲಿಯನ್ನು ಅತೀಕ್ರಮಿಸಿಕೊಂಡು ಕಾನೂನು ಬಾಹಿರವಾಗಿ ಕಾಂಪೌಂಡನ್ನು ನಿರ್ಮಿಸಿಕೊಂಡಿರುವ ಬಗ್ಗೆ ಸರ್ಕಾರಿ ಸರ್ವೆಯರ್‌ಗಳಿಂದ ಅಳತೆ ಮಾಡಿಸಿ, ಅನಧೀಕೃ ಒತ್ತುವರಿಯನ್ನು ತೆರವುಗೊಳಿಸಲು ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಹಾಗೂ 2ನೇಯದಾಗಿ, ದೂರುದಾರರ ಮನೆಯ ಅಳತೆಗಳು ಹಾಗೂ 1999ರಲ್ಲಿ ಗ್ರಾಮ ಪಂಚಾಯತಿ ವತಿಯಿಂದ ನೀಡಲಾಗಿರುವ ಪಟ್ಟೆಯಲ್ಲಿನ ಅಳತೆಗಳಿಗೂ ಹಾಲಿ ಇರುವ ಅಳತೆಗಳಿಗೂ ಬಹಳ ವ್ಯತ್ಯಾಸವಿರುವ ಬಗ್ಗೆ ಸರ್ಕಾರಿ ಸರ್ವೆಯರ್‌ನಿಂದ ಅಳತೆ ಮಾಡಿಸಿ, ಕಾನೂನು ಬಾಹಿರವಾಗಿ ಮಾಡಿಕೊಂಡಿರುವ

SAM

ಅತಿಕ್ರಮಣಗಳನ್ನು ತೆರವುಗೊಳಿಸುವ ಬಗ್ಗೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

8. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984, ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಈ ವರದಿ ಮುಟ್ಟಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 9-2-17.

(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)
ಉಪಲೋಕಾಯುಕ್ತರು–2,
ಕರ್ನಾಟಕ ರಾಜ್ಯ, ಬೆಂಗಳೂರು.

9/2/17